ಅನ್ನು ತಾವು ನೋಡಬಹುದು. ಬೆಳಿಗ್ಗೆ ತಾವು ಕೊಟ್ಟ ಕೊಶ್ಚನ್‌ಪೇಪರ್ ಇದಲ್ಲ. ಕೊಶ್ಚನ್‌ಪೇಪರ್‌ಳು ಏನು ಔಟ್ ಆಗಿವೆಯೆಂದು ಹೇಳಿದ್ದಾರಲ್ಲ ಆ ತರಹ ಯಾವ ಕೊಶ್ಚನ್‌ಪೇಪರ್‌ಗಳು ಔಟ್ ಆಗಿಲ್ಲ. ಸುಮ್ಮನೆ ಯಾವುದೋ ಒಂದು ಕೊಶ್ಚನ್‌ಪೇಪರ್ ಅನ್ನು ಹಿಡಿದುಕೊಂಡು ಬಹಳ ತೀವ್ರವಾಗಿ ಇಲ್ಲಿ ದೊಡ್ಡದಾಗಿ ಕೊಶ್ಚನ್‌ಪೇಪರ್ ಔಟ್ ಆಗಿವೆಯೆಂದು ಹೇಳಿದರು. ಆದರೆ ಅಂತಹದ್ದು ಏನೂ ಆಗಿಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆ ಬಹಳ ಒಳ್ಳೆಯ ರೀತಿಯಿಂದ ನಡೆಯುತ್ತಿದೆ. ಅದನ್ನು ಮಾನ್ಯಸದಸ್ಯರಿಗೆ ನಾನು ಹೇಳಬಯಸುತ್ತಿದ್ದೇನೆ. ಕೊಶ್ಚನ್‌ಪೇಪರ್‌ಗಳು ನಮ್ಮ ಕಡೆಗೆ ಇವೆ. ತಾವು ಬೇಕಾದರೆ ನೋಡಬಹುದು.

ಪ್ರೊ ಎಂ. ಡಿ. ನಂಜುಂಡಸ್ವಾಮಿ : ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ ಅಷ್ಟೆ. ಏಕೆಂದರೆ ಅಕಸ್ಮಾತ್ ಆಗಿದ್ದರೆ ಸರಿಯಾಗಿ ಓದಿಕೊಂಡು ಬಂದಂತಹ ವಿದ್ಯಾರ್ಥಿಗಳಿಗೆ ತೊಂದರೆ ಯಾಗುತ್ತದೆಂದು ನಿಮ್ಮ ಗಮನವನ್ನು ಸೆಳೆದಿದ್ದೇವೆ. ಮೂರು ಗಂಟೆಗೆ ಇದರ ಸತ್ಯಾಂಶ ಗೊತ್ತಾಗುವುದು ಅನಂತರ ಕ್ರಮ ತೆಗೆದುಕೊಳ್ಳಲಿ ಎಂದು ಅಷ್ಟೇನೆ. ಮತ್ತೇನೂ ಅಲ್ಲ ಸುದ್ದಿ ಮಾಡುವುದಕ್ಕಲ್ಲ.

ಡಾ : ಹೆಚ್. ಡಿ. ಲಮಾಣಿ : ಅದರ ಬಗ್ಗೆ ಅಲ್ಲಿ ಇಲ್ಲಿ ಓಡಾಡಿ ಎಲ್ಲಾ ಡಿಡಿಪಿಐಗಳಿಗೆ ಫೋನ್ ಮಾಡಬೇಕಾಯಿತು. ಅಂತೂ ತಮ್ಮ ಎದುರಿಗೆ ಇದ್ದ ಪರಿಸ್ಥಿತಿಯನ್ನು ಇಟ್ಟಿದ್ದೇವೆ. ಅಂತಹದ್ದು ಏನೂ ಆಗಿಲ್ಲ.

ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ 1993 (ಮುಂದುವರಿದ ಚರ್ಚೆ)

ಪ್ರೊ : ಎಂ. ಡಿ.ನಂಜುಂಡಸ್ವಾಮಿ : ಈ ಮಸೂದೆಗೆ ಸಂಬಂಧಪಟ್ಟಹಾಗೆ ಒಂದೇ ಒಂದು ವಿಷಯ ಹೇಳ ುವುದು ಇತ್ತು. ಯಾವರೀತಿಯಲ್ಲಿ ಅಧಿಕಾರೀಕರಣ ಹಾಗೆಯೇ ಉಳಿದಿದೆ ಈ ಮಸೂದೆಯಲ್ಲಿ ಅಂತ ಹೇಳ ುತ್ತಿದ್ದೇನೆ. ನಿಮ್ಮ ಸೆಕ್ಷನ್ 196ರ ಬಗ್ಗೆ ನನ್ನದೊಂದು ವಿಶೇಷ ಪ್ರಾರ್ಥನೆ. ಜೀಫ್ ಎಕ್ಸಿಕ್ಯುಟಿವ್ ಆಫೀಸರ್ ಎಂದು ಯಾವುದು ಇದೆ ಜಿಲ್ಲಾಪಂಚಾಯತ್‌ನಲ್ಲಿ, ನನ್ನ ಅಭಿಪ್ರಾಯದಲ್ಲಿ, he should also be from the state civil service onlyಅದಕ್ಕೆ ಕಾರಣಬೇರೆ ಯಾವುದೇ ಅಧಿಕಾರಿಯನ್ನು ನೇಮಕ ಮಾಡಿದರೂ ಅವರ ಮೇಲೆ ನಮಗೆ ಸಂಪೂರ್ಣ ನಿಯಂತ್ರಣ ಇರುವುದಿಲ್ಲ. ಆ ಕಾರಣ ಅವರು ನಮಗೆ ವಿಧೇಯ ರಾಗಿಯೂ ಕೆಲಸ ಮಾಡುವುದಿಲ್ಲ. ವಿಧೇಯಕರಾಗಿ ಕೆಲಸ ಮಾಡುವ ಸಾಧ್ಯತೆಗಳು ಕಡೆಮೆ. ಆ ಕಾರಣ ಸೇಕ್ಷನ್ 155 ರಲ್ಲಿ ಏನು ಮಾಡಿದ್ದೀರಿ Group A Officer of the State Service equal to the rank of Assistant Commissioner. Similarly, Officer of theState Civil Service equal or not below the rank of Deputy Commissioner. ಅಂತ ಆದರೆ ಒಳ್ಳೆಯದು. ಮಿಕ್ಕ ಬೇರೆಯವರನ್ನು ಅಲ್ಲಿ ಹಾಕಿದ್ದರೆ ಅಷ್ಟಾಗಿ ಅವರು ವಿಧೇಯತೆಯಿಂದ ಕೆಲಸ ಮಾಡುವುದಿಲ್ಲ ಎಂದು ನಮಗೆ ಬಂದಿರುವ ಮಾಹಿತಿ ಪ್ರಕಾರ ನಾನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರುಗಳಾದ ಗುರುಪಾದಪ್ಪ ನಾಗಮಾರಪಲ್ಲಿ, ಮದುಸ್ವಾಮಿ, ಸಿದ್ದನಗೌಡ, ನಾರಾಯಣಸ್ವಾಮಿ, ಹಂಪನಗೌಡ, ಎಂ.ಎಸ್.ಪಾಟೀಲ್, ಎಲ್ಲರೂ ಗೈರುಹಾಜರಿ ಇದ್ದಾರೆ. ಶ್ರೀ ಆರ್.ವಿ. ದೇಶಪಾಂಡೆಯವರು ಮಾತನಾಡಬಹುದು.

ಶ್ರೀ ಆರ್.ವಿ. ದೇಶಪಾಂಡೆ : ಸ್ಕೂಲಿನಹಾಗೆ ತಾವು ಆಬ್ಸೆಂಟ್ ಎಂದು ಹೇಳುವುದು, ಅವರು ಇಲ್ಲದಿರುವುದು ಇಲ್ಲಿ ನಡೆದಿದೆ.

ಅಧ್ಯಕ್ಷರು : ಏನು ಮಾಡುವುದಕ್ಕಾಗುತ್ತದೆ, ಅವರು ಹೆಸರು ಕೊಟ್ಟಿದ್ದಾರೆ, ನಾವು ಕರೆಯದಿದ್ದರೆ ಕರಿಯಿಲಿಲ್ಲವೆಂದು ಹೇಳುತ್ತಾರೆ.

ಶ್ರೀ ಆರ್.ವಿ.ದೇಶಪಾಂಡೆ : ನಾವೇನು ಪಟ್ಟಿ ಕೊಟ್ಟಿದ್ದೇವೆ, ಆ ಪ್ರಕಾರ ನಡೆದಿಲ್ಲ.

ಅಧ್ಯಕ್ಷರು : ಅದೇ ಪ್ರಕಾರ ಹೋಗಿದ್ದೇವೆ.

ಶ್ರೀ ಆರ್.ವಿ.ದೇಶಪಾಂಡೆ : ಈಗ ವಾಟಾಳ್ ನಾಗರಾಜ್ ಮತ್ತು ಬೈರೆಗೌಡೇರು ಆಬ್ಸೆಂಟ್ ಆಗಿದ್ದಾರೆ, ಹಾಗಾದರೆ ಮಾತನಾಡುವುದಕ್ಕೆ ಅವರಿಗೆ ಅವಕಾಶ ಕೊಡುವುದಿಲ್ಲವೆಂದು ಹೇಳುವುದಕ್ಕಾಗುತ್ತದೆಯೇ ?

ಅಧ್ಯಕ್ಷರು : ಅವಕಾಶ ಕೊಡುವುದಿಲ್ಲವೆಂದು ಅಲ್ಲ. ಹೆಸರು ಕರೆದಾಗ ಇದ್ದಿಲ್ಲವೆಂದು ಗೊತ್ತಾಗುತ್ತದೆ.

ಶ್ರೀ ಆರ್.ವಿ.ದೇಶಪಾಂಡೆ : ತಾವು ದಯಮಾಡಿ ಇದರ ಲಾಭ ಪಡೆದುಕೊಳ್ಳಬೇಡಿ. ಯಾರಿಗೆ ಮಾತನಾಡುವುದಕ್ಕೆ ಇಚ್ಛೆಯಿದೆ ಅವರು ಮಾತನಾಡಲಿ.

ಅಧ್ಯಕ್ಷರು : ಆಯಿತು.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರು ಸ್ಕೂಲ್ ಅಟೆಂಡೆನ್ಸ್ ಕರೆದಹಾಗೆ ಕರೆಯುತ್ತಾರೆಂದು ಹೇಳಿದರು. ನಾವು ಒಂದೊಂದು ಸಾರಿ ಕಾಲೇಜಿನಲ್ಲಿ ಯಾರಾದರೂ ಆಬ್ಸೆಂಟ್ ಆದರೆ ಫ್ರಾಕ್ಸಿ ಹೇಳುತ್ತಾ ಇದ್ದೀರಿ ಹಾಗೆ ಹೇಳೋಣವೆಂದು ನಾವು ಈಗ ಯೋಚನೆ ಮಾಡಿದೆವು.

ಶ್ರೀ ಆರ್.ವಿ.ದೇಶಪಾಂಡೆ (ವಿರೋಧ ಪಕ್ಷದನಾಯಕರು) : ಮಾನ್ಯ ಅಧ್ಯಕ್ಷರೇ, ಈಗ ಏನೊಂದು ಪಂಚಾಯತ್ ರಾಜ್ ಮಸೂದೆಯನ್ನು ಸರ್ಕಾರ ತಂದಿದೆ, ಅದರ ಬಗ್ಗೆ ಈಗಾಗಲೇ ಸಾಕಷ್ಟು ಬೆಳಕನ್ನು ಈ ಸದನದ ಸದಸ್ಯರು ಚೆಲ್ಲಿದ್ದಾರೆ. ಮಾನ್ಯ ಅಧ್ಯಕ್ಷರೇ ತಾವು ಹೌಸ್‌ನ್ನು ಸ್ವಲ್ಪ ಆರ್ಡರ್‌ಗೆ ತರಬೇಕು. ಇಲ್ಲದಿದ್ದರೆ ನಮಗೆ ಬಹಳ ಕಷ್ಟವಾಗುತ್ತದೆ. ಹತ್ತು-ಹನ್ನೆರೆಡು ಜನರು ಈಗ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು : ಎಲ್ಲರೂ ಶಾಂತರೀತಿಯಿಂದ ಕುಳಿತುಕೊಳ್ಳಬೇಕು.

ಶ್ರೀ ಆರ್.ವಿ. ದೇಶವಾಂಡೆ : ಇವತ್ತು ನನ್ನ ಸ್ಪಷ್ಟವಾದ ಅಭಿಪ್ರಾಯ ಏನೆಂದರೆ ಈ ಒಂದು ಮಸೂದೆಯನ್ನು ಸರ್ಕಾರ ಏನು ತಂದಿದೆ, ಇದರ ಅವಶ್ಯಕತೆ ಇದ್ದಿಲ್ಲವೆಂದು ನನ್ನ ಒಂದು ವಿಚಾರ. 1983 ನೇ ಇಸವಿಯಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗೆಡೆಯವರು ಮುಖ್ಯ ಮಂತ್ರಿಗಳಿದ್ದಾಗ ಏನು ಒಂದು ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದರು, ಅದು ಇಡೀ